INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -4, July-August, 2025
PageNo,-131-145
Peer -Reviewed, Refereed Journal

# ಚಾಮರಾಜನಗರ ಜಿಲ್ಲೆಯ ತತ್ತ್ವಪದಗಳು : ಆಚರಣಾತ್ಮಕ ನೆಲೆ

ಡಾ. ಮಹಾದೇವಸ್ವಾಮಿ.ಎಂ.[1]

ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಪ್ರಕಾರವಾದ ತತ್ತ್ವಪದಗಳು ಸಾಮುದಾಯಿಕ ಚಹರೆಯನ್ನು ಹೊಂದಿವೆ. ಹದಿನಾರನೆಯ ಶತಮಾನದಲ್ಲಿ ನಿಜಗುಣ ಶಿವಯೋಗಿಗಳಿಂದ ಅಧಿಕೃತವಾಗಿ ಪ್ರಾರಂಭವಾದ ಈ ತತ್ತ್ವಪದ ಸಾಹಿತ್ಯ, ಇಂದಿನವರೆವಿಗೂ ವಿವಿಧ ಆಯಾಮಗಳನ್ನು ಪಡೆದು ಬೆಳೆದುಕೊಂಡು ಬಂದಿದೆ. ತತ್ವಪದ ಸಾಹಿತ್ಯವು ಲಿಖಿತ ಮತ್ತು ಅಲಿಖಿತ ಪರಂಪರೆಗಳೆರಡರಲ್ಲೂ ರಚನೆಯಾಗಿದ್ದರೂ ಸಹಾ ಪ್ರಚಾರವಾಗಿದ್ದು ಮಾತ್ರ,ಮೌಖಿಕ ಪರಂಪರೆಯಿಂದಾಗಿಯೇ ಆಗಿದೆ. ಲಿಖಿತ ಸಾಹಿತ್ಯ ಪರಂಪರೆಗಿಂತಲೂ ಮೌಖಿಕ ಸಾಹಿತ್ಯ ಪರಂಪರೆ ಪ್ರಾಚೀನವಾದದ್ದು. ಅದಕ್ಕೆಂದೆ ಮೌಖಿಕ ಸಾಹಿತ್ಯವನ್ನು ಸಾಹಿತ್ಯದ ತಾಯಿಬೇರು ಎಂದು ಕರೆಯಲಾಗಿದೆ. ಲಿಖಿತ ಸಾಹಿತ್ಯ ಸಾಮಾನ್ಯವಾಗಿ ರಾಜಾಶ್ರಯ, ಮಠಮಾನ್ಯಗಳು, ಪ್ರತಿಷ್ಠಿತ ಹಿನ್ನೆಲೆಯ ವ್ಯಕ್ತಿಗಳಂಥವರಿಂದ ರಚನೆಯಾಗಿದ್ದರೆ; ಮೌಖಿಕ ಸಾಹಿತ್ಯ ಜನಪದರಿಂದಲೇ ಜನ್ಮತಾಳಿದೆ. ಲಿಖಿತ ಸಾಹಿತ್ಯ ರಚನೆಯಲ್ಲಿ ಸಮಾಜದ ಮೇಲುಸ್ತರದ ಜನಗಳು ಮಾತ್ರ ಭಾಗವಹಿಸಿದ್ದರೆ; ಮೌಖಿಕ ಸಾಹಿತ್ಯದಲ್ಲಿ ಹಿಂದುಳಿದ ಮತ್ತು ತಳಸಮುದಾಯಗಳ ರೈತಾಪಿ ಜನವರ್ಗ ಹೆಚ್ಚಾಗಿ ಭಾಗವಹಿಸಿದ್ದಾರೆ.

ಇಂಥ ಅನೇಕ ಅನುಭಾವಿಗಳು ಆಶುಕವಿತ್ವದ ಮೂಲಕ ಜನರ ಮಧ್ಯೆ ತಮ್ಮ ಅನುಭವವನ್ನು ಹಾಡಿನ ಮೂಲಕ ಕಟ್ಟಿ ಹಾಡಿದ್ದಾರೆ. ಅವುಗಳಲ್ಲಿ ನಮ್ಮ ಜನರು ವಿವಿಧ ಸಂದರ್ಭಗಳಲ್ಲಿ ಬದುಕನ್ನು ಎದುರಿಸಿದ ಬಗೆ ಮತ್ತು ಅವುಗಳಿಗೆ ಪರಿಹಾರ ರೂಪವಾಗಿ ಕಂಡುಕೊಂಡ ಆಲೋಚನೆಗಳು ಮೈವೆತ್ತಿ ಬಂದಿವೆ. ಇವುಗಳು ಸಮುದಾಯಗಳ ಮಧ್ಯೆ ಪ್ರಸಾರಗೊಂಡು, ಸಾಮೂಹಿಕ ರಚನೆಗಳೇ ಆಗಿವೆ. ಹೀಗಾಗಿ ಒಂದು ಸಮುದಾಯದ ಸಂಸ್ಕೃತಿಯನ್ನು ಗರ್ಭೀಕರಿಸಿಕೊಂಡಿರುವ ಮಾಧ್ಯಮಗಳಾಗಿ, ತತ್ವಪದಗಳು ನಮ್ಮನ್ನು ಎದುರುಗೊಳ್ಳುತ್ತವೆ. ಶಿಷ್ಠ ಪರಂಪರೆಯಲ್ಲಿ ದಾಖಲುಗೊಂಡ ತತ್ವಪದಗಳನ್ನು ಹಲವು ಹವ್ಯಾಸಿ ಹಾಡುಗಾರರು ಮತ್ತು ಪ್ರಮುಖವಾಗಿ ಗುರುದೀಕ್ಷೆ ಪಡೆದ ಭಜನಾ ಮಂಡಳಿಯ ಹಾಡುಗಾರರು ಹಾಡಿನ ಮೂಲಕ ಜನಮಾನಸವನ್ನು ತಲುಪಿದ್ದಾರೆ. ತತ್ವಪದಗಳು ಗ್ರಾಮೀಣ ಪ್ರದೇಶಗಳ

[1].ಸಹಾಯಕ ಪ್ರಾಧ್ಯಾಪಕರು,ಕನ್ನಡ ವಿಭಾಗ, ಸೇಪಿಯೆಂಟ್ ಕಾಲೇಜು,ಕೆ.ಆರ್.ಎಸ್.ಮುಖ್ಯರಸ್ತೆ,ಮೇಟಗಳ್ಳಿ,ಮೈಸೂರು.

ಕಂದೀಲಿನ ಬೆಳಕಿನಲ್ಲಿ, ಬೆಳದಿಂಗಳ ರಾತ್ರಿಯಲ್ಲಿ ಏಕತಾರಿ ನಾದದ ಮೂಲಕ ಇಂದಿಗೂ ಹೊರಹೊಮ್ಮುತ್ತಾ ಒಂದು ಚಿಕ್ಕ ಸಂಸ್ಕೃತಿ ಕೇಂದ್ರವನ್ನು ನಿರ್ಮಿಸಿವೆ. ಹಾಡಿನ ನಾದದ ಜೊತೆಗೆ ಇಹ–ಪರದ ವಿಚಾರಗಳೂ, ಚರ್ಚೆಗಳೂ ಇಲ್ಲಿ ನಡೆಯುತ್ತವೆ.

ತತ್ತ್ವಪದಗಳನ್ನು ಕುರಿತು "ತತ್ವಪದಗಳು ಗತದ ಕುತೂಹಲವಾದ ಒಂದು ಕಾವ್ಯ ಪ್ರಕಾರವಲ್ಲ, ಅದೊಂದು ಸಂಸ್ಕೃತಿ, ಆಚರಣೆ. ಯಾಕೆಂದರೆ ಅದಕ್ಕೆ ಒಂದು ಸಾಮೂಹಿಕ ಆಚರಣೆಯಿದೆ. ಸಂಗೀತ, ಹಾಡುಗಾರಿಕೆ, ತಾತ್ವಿಕತೆ, ಧೂಪ ದೀಪಗಳು ಎಲ್ಲವೂ ಅದರಲ್ಲಿ ಕೂಡಿಕೊಳ್ಳುತ್ತವೆ. ಅದಕ್ಕೊಂದು ಪವಿತ್ರ ಭೂಗೋಳವಿದೆ.ಅದು ನಡೆಯುವುದು ಸಂತರ ಸನ್ನಿಧಿಯಲ್ಲಿ, ಗದ್ದುಗೆಯಲ್ಲಿ, ದೇವಸ್ಥಾನದ ಹಜಾರದಲ್ಲಿ"[1] ಎಂಬ ಅಭಿಪ್ರಾಯವಿದೆ. ಹಾಗಾಗಿ ಇವುಗಳನ್ನು ಸಾಹಿತ್ಯಿಕ ರಚನೆಗಳೆಂದು ಅಭ್ಯಸಿಸಿದಾಗ ಸಿಗುವ ಅನುಭವ ಆಂಶಿಕವಾದುದು. ತತ್ತ್ವಪದಗಳು ಕೇವಲ ಸಾಹಿತ್ಯಿಕ ರಚನೆಗಳಲ್ಲ, ಅವು ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆದಿವೆ. ಕರ್ನಾಟಕದ ನಾನಾ ಭಾಗಗಳಂತೆಯೇ ಚಾಮರಾಜನಗರ ಜಿಲ್ಲೆಯಾದ್ಯಂತ ಬಹಳಷ್ಟು ಹಳ್ಳಿಗಳಲ್ಲಿ ಅವುಗಳು ಇಂದಿಗೂ ಆಚರಣೆಗೊಳ್ಳುತ್ತಿವೆ. ಗುರುಸ್ತುತಿ, ದೇವತಾಸ್ತುತಿ, ಇಹ–ಪರ ತತ್ವಗಳು, ರಿವಾಯತ್‌ಗಳು, ಮೊಹರಂ ಪದಗಳು ಮೊದಲಾದವು ಈ ಭಾಗದ ಜನಸಮುದಾಯಗಳಲ್ಲಿ ಬಳಕೆಯಲ್ಲಿವೆ. ಅಮವಾಸೆ, ಹುಣ್ಣಿಮೆ, ಜಾತ್ರೆ, ಹಬ್ಬ–ಹರಿದಿನಗಳು, ಹಿರಿಯ ಗುರುಗಳ ಪುಣ್ಯತಿಥಿ, ಆರಾಧನೆಯ ಸಂದರ್ಭಗಳಲ್ಲಿ ಅಲ್ಲದೆ ಸಾವಿನ ಮನೆಯ್ಲಲಿಯೂ ಇವು ಬಳಕೆಯಾಗುತ್ತವೆ. ಮುಂಜಾನೆಯಿಂದ ಸಂಜೆಯವರೆಗೆ ಹೊಲಗದ್ದೆಗಳಲ್ಲಿ ದುಡಿದು ಬಂದ ಗ್ರಾಮೀಣ ಸಮುದಾಯಕ್ಕೆ ಏಕತಾರಿ ನಾದದ ಜೊತೆ ಹೊರಹೊಮ್ಮುವ ಅರ್ಥಗರ್ಭಿತ ತತ್ವಪದಗಳು ಮುದವನ್ನು ಮತ್ತು ಮನರಂಜನೆಯನ್ನು ನೀಡುತ್ತವೆ. ಜೀವನದಲ್ಲಿ ಹಲವು ಪಾರಮಾರ್ಥಿಕ ಅಂಶಗಳ ಬಗೆಗೆ ತಿಳಿವಳಿಕೆಯನ್ನು ಮೂಡಿಸಿ ಅರಿವನ್ನು ಹೆಚ್ಚಿಸುತ್ತವೆ. ಅನುಭಾವದ ಬಗೆಗೆ ಜನರಲ್ಲಿ ಜ್ಞಾನವನ್ನು, ಭಕ್ತಿಯನ್ನು ಮೂಡಿಸುವ ಮೂಲಕ ನೆಮ್ಮದಿಯನ್ನು, ಮನೋಶಾಂತಿಯನ್ನು ಕೊಡುತ್ತವೆ. ಹೀಗಾಗಿ ತತ್ವಪದಗಳು ನಮ್ಮ ನಡುವಿನ ಅಪರೂಪದ ಸಾಹಿತ್ಯ ರೂಪಗಳಾಗಿವೆ. ನಮ್ಮ ಜನರ ಭಾವನೆ ಮತ್ತು ಆಲೋಚನೆಗಳನ್ನು ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಅರ್ಥಪೂರ್ಣವಾಗಿ ದಾಖಲಿಸಿದ ರಚನೆಗಳಾಗಿವೆ.

ತತ್ವಪದಗಳು ಒಂದು ಅನುಭವದ ಘಟನೆಯಿಂದ ಹುಟ್ಟುತ್ತವೆ. ಆ ಘಟನೆಗಳ 'ತತ್ವ'ವನ್ನು ಭೇದಿಸುವುದರ ಮೂಲಕ ಆ ಅನುಭವವನ್ನು ಅನುಭಾವಕ್ಕೆ ತಿರುಗಿಸುತ್ತವೆ. ಅಷ್ಟೇ ಅಲ್ಲದೆ ಸಂತರ ಅಥವಾ ಶಿಷ್ಯರ ಬದುಕಿನ ಘಟನೆಗಳೇ ತತ್ತ್ವಪದಗಳಿಗೆ ವಿವರಣೆಯಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಹಲವಾರು ತತ್ತ್ವಪದಗಳು ರಚನೆಗೊಂಡಿರುವುದು ನಮ್ಮ ಮುಂದಿವೆ.

ಅನುಭಾವಿ ಪಂಥಗಳು ಮೇಲು ಅಥವಾ ತಳಸಂಸ್ಕೃತಿಗಳ ಆಚರಣೆ, ನಂಬಿಕೆಗಳ ವಿಷಯದಲ್ಲಿ ಎರಡು ರೀತಿಯ ನಿಲುವನ್ನು ತೋರಿಸಿವೆ. ಒಂದು ನಿರಾಕರಣೆ, ಮತ್ತೊಂದು ಸ್ವೀಕರಣೆ. ಉದಾಹರಣೆಗೆ

12ನೇ ಶತಮಾನದ ವಚನಕಾರರು ಶೈವಧರ್ಮದ ಕೆಲವು ಪರಿಕರಗಳನ್ನು ಹಾಗೆಯೇ ಉಳಿಸಿಕೊಂಡು ಇನ್ನು ಕೆಲವನ್ನು ನವೀಕರಿಸಿಕೊಂಡರು. ಉಳಿದೆಲ್ಲಾ ಸಂಸ್ಕೃತಿ, ಆಚರಣೆಗಳನ್ನು ನಿರಾಕರಿಸಿದರು. ಯಾಗ, ದಾನ, ಬಲಿ, ದೇವಾಲಯ ಮತ್ತು ಗ್ರಾಮದೇವತೆಯೇ ಮುಂತಾದ ತಳ ಸಮುದಾಯಗಳ ಸಂಸ್ಕೃತಿಗಳ ಬಹುದೇವೋಪಾಸನಾ ಪ್ರವೃತ್ತಿಗಳ ಮೇಲೆ ವಚನಕಾರರು ಕಿಡಿಕಾರಿದ್ದಾರೆ. ಅನಂತರದ ದಾಸ ಪಂಥದವರೂ ಮೇಲು ಸಂಸ್ಕೃತಿಯ ಪ್ರತೀಕಗಳಾದ ದೇವಾಲಯ, ದಾನ, ಧರ್ಮ, ಯಜ್ಞ, ಯಾಗ– ಇವೆಲ್ಲವನ್ನು ಸ್ವೀಕರಿಸಿದರು. ಆದರೆ ಅವರ ನಿರಾಕರಣೆ ಇದ್ದುದು ಕನಕದಾಸರ ಮಾತಿನಲ್ಲಿ ಹೇಳಬೇಕಾದರೆ 'ಬಣಗು ದೈವ'ಗಳ ಬಗ್ಗೆ. ಹೀಗೆ ದಾಸಪಂಥದವರು ಬಹುಮಟ್ಟಿಗೆ ತಳಸಂಸ್ಕೃತಿಯನ್ನು ನಿರಾಕರಿಸಿದರು. ಶರಣ ಚಳವಳಿ ಹಾಗೂ ದಾಸಪಂಥಗಳೆರಡೂ ಮೂಲಭೂತವಾಗಿ ಏಕದೇವೋಪಾಸನೆಯ ಮಾದರಿಗಳಾಗಿವೆ. ಆದರೆ ತತ್ತ್ವಪದಕಾರರು ಮೇಲು ಮತ್ತು ತಳಸಂಸ್ಕೃತಿಗಳ ಸಂಕೇತಗಳ ವಿಚಾರದಲ್ಲಿ ಸ್ವೀಕಾರ ಭಾವವನ್ನು ತಾಳಿ ಆ ಎಲ್ಲಾ ಬಾಹ್ಯ ಆಚರಣೆಗಳ ವೈವಿಧ್ಯದಲ್ಲಿ ಅಂತರಂಗದ ಅನುಭಾವದ ಏಕತೆಯನ್ನು ಹುಡುಕುತ್ತಾರೆ. "ಶಿಶುನಾಳ ಷರೀಫರು ಎಲ್ಲಮ್ಮನ ಜಾತ್ರೆಯ ಬಗ್ಗೆ, ಪಂಚಮಿ ಹಬ್ಬದ ಬಗ್ಗೆ ಮನದುಂಬಿ ಹಾಡಿದ ಹಾಗೆ ಬಸವಾದಿ ಶರಣರು ಹಾಡುವುದನ್ನು ಊಹಿಸುವುದೂ ಕಷ್ಟ"[2] ಎಂಬ ಅಭಿಪ್ರಾಯ ಸಮಂಜಸವಾಗಿದೆ. ಬೇರೆ ಬೇರೆ ಸಂಸ್ಕೃತಿ, ನಂಬಿಕೆಗಳ ನಡುವೆ ಒಂದಾಗಿ ಬಾಳುತ್ತಿದ್ದ ತತ್ತ್ವಪದಕಾರರು ಅವರ ನಂಬಿಕೆ, ಆಚರಣೆಗಳನ್ನು ಜರಿಯದೆ, ಅನುಭಾವದ ಮೂಲಕ ಅವೆಲ್ಲವನ್ನೂ ಏಕಸೂತ್ರದಲ್ಲಿ ಜೋಡಿಸುವ ಹಾದಿಯಲ್ಲಿದ್ದರು. ಅವರ ಲೋಕದಲ್ಲಿ ಎಲ್ಲಾ ಆಚರಣೆಗಳು, ವಿಧಿಗಳು, ಸಣ್ಣಪುಟ್ಟ ಕೆಲಸ ಕಾರ್ಯಗಳು ಅರ್ಥಪೂರ್ಣವಾಗಿ ವೈಶಿಷ್ಟ್ಯದಿಂದ ಕೂಡಿವೆ.

ವಚನಕಾರರಂತೆಯೇ ತತ್ತ್ವಪದಕಾರರು ತಮ್ಮ ಅನೇಕ ತತ್ತ್ವಪದಗಳಲ್ಲಿ ಕಾಯಕ ಮಹತ್ವವನ್ನು ಸಾರಿದ್ದಾರೆ. ಇಂತಹ "ತತ್ವಪದಕಾರರು ಕಾಯಕವಂತರು, ಕಾಯಕವಿಲ್ಲದೆ ಬದುಕಬಾರದೆಂದು ಇವರು ಬೋಧಿಸಿದರು. ಎಲ್ಲಾ ಕಾಯಕಗಳು ಪವಿತ್ರವಾದವು ಎಂದು ಸಾರಿ ಪಾರಮಾರ್ಥ ಸಾಧನೆಗೆ ಇವು ಬೇಕೆ ಬೇಕು ಎಂದು ಹೇಳಿದರು"[3] ಹಾಗೆ ಗಮನಿಸಿದರೆ ಅವರು ಮಾಡುತ್ತಿದ್ದ ಕಾಯಕವೇ ಪಾರಮಾರ್ಥಗಳಾಗಿದ್ದವು. ಪ್ರಾಮಾಣಿಕತೆ, ಇನ್ನೊಬ್ಬರ ದುಃಖದಲ್ಲಿ ಭಾಗಿಯಾಗುವಿಕೆ, ಸಾಮಾನ್ಯ ವ್ಯವಹಾರ ಜ್ಞಾನ, ವೇಳೆಯ ಮಹತ್ವ, ಪರನಾರಿ ಸೋದರತನ, ಎಲ್ಲರೂ ಒಂದೇ ಎಂಬ ಮನೋಭಾವ ಮುಂತಾದ ಉತ್ತಮ ಸಮಾಜವನ್ನು ಕಾಪಾಡುವ ಗುಣಗಳನ್ನು ಇವರು ಜನರಿಗೆ ತಿಳಿಸಿದರು. ಅಲ್ಲದೆ "ಸರ್ವ ಸಮಾನತೆಯನ್ನು ಬೆಳೆಸಿದರು. ಜಾತಿಮತಗಳ ಎಲ್ಲೆಗಳನ್ನು ಅಳಿಸಿದರು. ಮಾನವೀಯತೆಯನ್ನು ಮೆರೆದರು. ಸಕಲ ಜೀವಿಗಳ ಲೇಸೇ ಅವರ ಧರ್ಮವಾಗಿತ್ತು."[4] ಎಂಬ ಅಭಿಪ್ರಾಯವಿದೆ. ಅದೇ ರೀತಿಯಾಗಿ ಅವರ ಬದುಕಿನಲ್ಲಿ ಯಾವತ್ತೂ ಧರ್ಮದ ತಿಕ್ಕಾಟ ಬರಲಿಲ್ಲ. ಪರಧರ್ಮಸಹಿಷ್ಣುತೆಗಿಂತ

ಪರಧರ್ಮ ಗೌರವ ಹೆಚ್ಚಿನದು; ಇದು ಬೆಳೆದರೆ ಸಮಾಜ ಚೆನ್ನಾಗಿರುತ್ತದೆ ಎಂಬ ಸತ್ಯವನ್ನು ಅರಿತಿದ್ದನ್ನು ತತ್ತ್ವಪದಕಾರರು ಎಲ್ಲಾ ಧರ್ಮಗಳನ್ನು ಸಮಾನ ಗೌರವದಿಂದ ಕಂಡರು. ಕಟ್ಟುಕಟ್ಟಳೆಗಳನ್ನು ಮೀರಿ ಆಯಾ ಧರ್ಮದ ದೇವರು, ಆಚರಣೆ, ಸಂಪ್ರದಾಯ, ಹಬ್ಬ, ಜಾತ್ರೆ ಕುರಿತು ಪದ ಕಟ್ಟಿ ಹಾಡಿದರು.

**ಹಬ್ಬ ಮತ್ತು ಆರಾಧನೆ :**

ಹಲವು ಧರ್ಮಗಳ ನಡುವೆ ಸಮನ್ವಯತೆಯನ್ನು ಸಾಧಿಸಿದ ಒಂದು ಮಾನವ ಧರ್ಮದ ಜನಪರ ಮೌಲ್ಯಗಳು ಅತ್ಯಂತ ಕುತೂಹಲಕಾರಿಯಾದ ವಿಷಯಗಳಾಗಿವೆ. ಜನರಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತರಿಸುವ, ಮನುಷ್ಯ ಧರ್ಮವನ್ನು ತಿಳಿಸುವ ಸಾದು ಸಂತ, ಸೂಫಿ ಮಹಾತ್ಮರುಗಳು ತಮ್ಮ ಜೀವಿತದ ಅವಧಿಯಲ್ಲಿ ಬಿತ್ತರಿಸಿದ ತತ್ತ್ವಪದಗಳು ಹಾಗೂ ಅವರ ಮಹತ್ವದ ನುಡಿಗಳು ಜನಮನದಲ್ಲಿ ಇಂದಿಗೂ ಅಚ್ಚಳಿಯದೇ ಉಳಿದಿವೆ. ಈ ಸಾದು ಸಂತರ, ತತ್ತ್ವಪದಕಾರರ ಜೀವನ ಮತ್ತು ಅವರ ನುಡಿಗಳಲ್ಲಿ ನಂಬಿಕೆಯಿಟ್ಟು ಅವರನ್ನು ಅನುಸರಿಸುವ, ಅವರಿಂದ ಗುರುದೀಕ್ಷೆ ಹೊಂದಿದ ಶಿಷ್ಯರ ಗುಂಪು ಇಂಥ ಮಹಾತ್ಮರು ತೀರಿಕೊಂಡಾಗ ಪೂಜ್ಯಭಾವದಿಂದ ಅವರಿಗೆ ಗೋರಿಯೊಂದನ್ನು ಕಟ್ಟಿಸುತ್ತಾರೆ. ಮುಂದೆ ಇವು ಶಕ್ತಿಕೇಂದ್ರಗಳಾಗಿ, ಪವಾಡಸ್ಥಳಗಳಾಗಿ ಮಾರ್ಪಾಡಾಗುತ್ತವೆ. ಕೆಲವೊಮ್ಮೆ ತತ್ತ್ವಪದಕಾರರಂಥ ಸಿದ್ಧಪುರುಷರು ಧ್ಯಾನ, ತಪಸ್ಸು ಮಾಡುತ್ತಿದ್ದ ಸ್ಥಳಗಳೂ ಪೂಜೆಗೊಳ್ಳುವ, ಭಕ್ತಿಯಿಂದ ನಡೆದುಕೊಳ್ಳುವ ಕೇಂದ್ರಗಳಾಗಿ ನಿರ್ಮಾಣಗೊಳ್ಳುತ್ತವೆ. ಧಾರ್ಮಿಕ ಸಹಿಷ್ಣುತಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತವೆ. ಯಾವುದೇ ಒಂದು ಧರ್ಮಕ್ಕೆ ಸೀಮಿತವಾಗಿರದ ಈ ಕೇಂದ್ರಗಳಲ್ಲಿ ಎಲ್ಲಾ ಸಮುದಾಯದ ಜನ ವಿಶೇಷ ಸಂದರ್ಭದಲ್ಲಿ ಒಂದೆಡೆ ಸೇರುತ್ತಾರೆ. ಭಕ್ತಿಯಿಂದ ನಡೆದುಕೊಳ್ಳುತ್ತಾರೆ.

ಚಾಮರಾಜನಗರ ಜಿಲ್ಲೆಯಾದ್ಯಂತ ಇಂತಹ ಅನೇಕ ಶಕ್ತಿಕೇಂದ್ರಗಳಿವೆ. ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಗುರುನಂಜಪ್ಪಸ್ವಾಮಿ, ಗುರು ಪೇರ್ಸಿಂಗಮೂರ್ತಿ, ರಾಚಪ್ಪಸ್ವಾಮಿ, ಗುರುನಂಜಪ್ಪಸ್ವಾಮಿ, ಅಂಬಳೆ ಕರುಗಯ್ಯ ಮುಂತಾದ ಸಿದ್ಧಪುರುಷರ ಸಮಾಧಿಗಳು ಶಕ್ತಿ ಕೇಂದ್ರಗಳಾಗಿ ಇಂದಿಗೂ ಪೂಜೆಗೊಳ್ಳುತ್ತಿವೆ. ಅಮವಾಸೆ, ಹುಣ್ಣಿಮೆಯಂದು ವಿಶೇಷ ಪೂಜೆ, ಭಜನೆಗಳು ಇಲ್ಲಿ ಜಾತ್ಯತೀತವಾಗಿ ಜರುಗುತ್ತವೆ. ವರ್ಷಕ್ಕೊಮ್ಮೆ ಆರಾಧನಾ ಮಹೋತ್ಸವವು ನಡೆಯುತ್ತದೆ. ಇದು 'ಗುರುಪುತ್ರ'ರಿಗೆ ದೊಡ್ಡ ಹಬ್ಬವಾಗಿದ್ದು, ಬಹಳ ಸಂಭ್ರಮದಿಂದ ಆಚರಿಸುತ್ತಾರೆ. ಹಿಂದೂ–ಮುಸ್ಲಿಂರು ಯಾವುದೇ ಭೇದವಿಲ್ಲದೆ ಇಲ್ಲಿ ಭಾಗವಹಿಸುತ್ತಾರೆ. ಶ್ರೀಮಂತ–ಬಡವ, ಮೇಲು–ಕೀಳು, ಗಂಡು–ಹೆಣ್ಣು ಎನ್ನುವ ತರತಮಭಾವವಿರದೆ ಎಲ್ಲರೂ ಸಮಾನತೆಯಿಂದ ಪಾಲ್ಗೊಳ್ಳುತ್ತಾರೆ.

**"ಸಾಕು ಮಾಡು ಜನ್ಮವಾ ಸಾಕು ಮಾಡು**
**ಸಾಕು ಮಾಡಯ್ಯ ಜನ್ಮ । ಸ್ವಾಮಿ ನಿಮ್ಮ**
**ಚರಣ ಕಮಲ ಬೇಕು ಎಂದು ನಂಬಿ ಬಂದಿರುವೆ**
**ಯಾಕೆ ಗುರುವೆ ಮರೆತುಇರುವೆ ॥"**[5]

ಎಂದು ಗುರುವಿನಲ್ಲಿ ಬೇಡಿಕೊಳ್ಳುತ್ತಾರೆ. ಮೈಮರೆತು ಗುರುಸ್ತುತಿ ಮಾಡುತ್ತಾರೆ.

ಚಾಮರಾಜನಗರದ ಹನೂರು, ರಾಮಪುರ, ಕಾಮಗೆರೆ ಮುಂತಾದ ಕಡೆ ಮೊಹರಂ ಹಬ್ಬವನ್ನು ಅತ್ಯಂತ ಸಂಭ್ರಮ ಸಡಗರದಿಂದ ಆಚರಿಸಲಾಗುತ್ತದೆ. ಮೂಲತಃ ಶೋಕಾಚರಣೆಯ ಸಂದರ್ಭವು ಸಂಭ್ರಮದಿಂದ ಆಚರಿಸಲು ಹಲವು ರಾಜಕೀಯ ಪ್ರೇರಣೆಗಳೂ ಒತ್ತಾಸೆಗಳೂ ಕಾರಣವಾಗಿವೆ. ಇಂದಿಗೂ ಹಿಂದೂ–ಮುಸ್ಲಿಂ ಭಾವೈಕ್ಯತೆಯ ಪ್ರತೀಕವೆಂದು ಮುಸ್ಲಿಮರಲ್ಲದೆ ಕೆಲವು ಹಳ್ಳಿಗಳಲ್ಲಿ ಹಿಂದೂಗಳೇ ಈ ಹಬ್ಬವನ್ನು ಇಂದಿಗೂ ಆಚರಿಸುತ್ತಾರೆ. ಇದನ್ನು 'ಅಲಾವಿ ಹಬ್ಬ'ವೆಂದು ಕರೆಯಲಾಗುತ್ತದೆ. ಮಸೀದಿಯೊಳಗೆ ಪೀರಲ ದೇವರನ್ನು ಪ್ರತಿಷ್ಠಾಪಿಸಿ, ಮಸೀದಿಯ ಮುಂದೆ ದೊಡ್ಡ ಗುಂಡಿಯನ್ನು ತೋಡಿ, ಅದರಲ್ಲಿ ಬೆಂಕಿಯನ್ನು ಉರಿಸಿ ಅದರ ಸುತ್ತಲೂ ತಿರುಗುತ್ತಾ ಹಿಂದೂ–ಮುಸ್ಲಿಂ ಭೇದವಿಲ್ಲದೆ ಹಾಡುತ್ತಾ ಹೆಜ್ಜೆ ಹಾಕುತ್ತಾರೆ. ಇದನ್ನು 'ಅಲಾವಿ ಹಾಡು'ಗಳು ಎಂದು ಕರೆಯುತ್ತಾರೆ.

**"ಭಂವಸ್ಯೆ ನೀಡಿದನೋ ಮೊಹಂ ಕೆಂವಸ್ಯೆ**
**ಅಲ್ಯೆ ಆಡಿದೆನೊ ಮೊಹಂಕ ಭಂವಸ್ಯೆ ಆಡಿದೆನು ॥ಪ॥**
**ಭವವೆಂಬ ಭಂವಸ್ಯೆ ಕರ್ಮವೆಂಬ ಕೆಂವಸ್ಯೆ**
**ಅರುವಿನ ಅಲಾಯ ಮೂರು ಕೂಡಿ ಮೊಹರಂ ಮಾಡಿದನಾ ॥**
**ತನುವೆಂಬ ನಿಜವಾದ ಮಸೂತಿಯೊಳು**
**ಪಂಚತತ್ವವೆಂಬ ಪಂಜೆಗಳನು**
**ಸಿಂಗರಿಸಿ ನಾ ಕೂಡ್ರಿಸಿದೆನೊ**
**ಈಡಾಪಿಂಗಳೆಂಬ ಹಸನ ಹುಸೇನಿಯರ**
**ಮಹಾಂತ ಜಿತಾ ಮೌಲಾಲಿಗೆ ತನುವಪ್ಪಿಸಿ ನಾ"[6]**

ಅಲಾವಿಯು ಬರೀ ಆಚರಣೆಯಲ್ಲ ಅದನ್ನು ಅರಿವಿನ ಅಲಾವಿಯಾಗಿ ಮಾಡಿ ಮೊಹರಂ ಹಬ್ಬವನ್ನು ಆಚರಿಸಬೇಕು ಎಂಬ ತತ್ವವು ಈ ಪದದಲ್ಲಿದೆ. ಮೊಹರಂ ಹಬ್ಬದಲ್ಲಿ ಅಲಾವಿ ಹೆಜ್ಜೆ ಹಾಕುವ ಆಚರಣೆಯನ್ನು ಆಧ್ಯಾತ್ಮಿಕ ಪರಿಭಾಷೆಯಲ್ಲಿ ವಿಶ್ಲೇಷಿಸುತ್ತಾ, ಬೆಡಗಿನ ಸ್ವರೂಪವನ್ನು ಪಡೆಯುವುದನ್ನು ಈ ಪದದಲ್ಲಿ ಕಾಣಬಹುದಾಗಿದೆ. ತನುವೆಂಬ ನಿಜವಾದ ಮಸೂತಿಯೊಳು ಪಂಚತತ್ವವೆಂಬ ಪಂಜೆಗಳನ್ನು ಕೂರಿಸಬೇಕು. ಅಂದರೆ ಬಾಹ್ಯ ಆಚರಣೆಯಲ್ಲಿ ಸೀಮಿತವಾಗುವ ಈ ಹಬ್ಬಕ್ಕಿಂತಲೂ ತನುವೆಂಬ ನಿಜವಾದ ಮಸೂತಿಯಲ್ಲಿ 'ಪಂಚತತ್ವದ ಪಂಜೆ'ಗಳನ್ನು ಕೂರಿಸಬೇಕು. ಜೊತೆಗೆ ಈಡಾ ಮತ್ತು ಪಿಂಗಳ ಎಂಬ ನಾಡಿಗಳನ್ನು ಹಸನ ಹುಸೇನಿಯರ ಮಹಾಂತನಾದ ಜಿತಾ ಮೌಲಾಲಿಗೆ ತನುವನ್ನು ಒಪ್ಪಿಸಬೇಕು ಅಂತರಂಗದಲ್ಲಿರುವ ಕಲ್ಮಶಗಳನ್ನು 'ಧಫನ್' ಮಾಡಬೇಕು. ಆ ಮೂಲಕ ಮದೀನದಲ್ಲಿ ಮುಕ್ತಿ

ಪಡೆಯಬೇಕು. ಈ ಅನುಭಾವಿಕ ಪರಿಭಾಷೆಯನ್ನು ಬಳಸುತ್ತಾ ಬಾಹ್ಯ ಆಚರಣೆಗಿಂತ ಅಂತರಂಗದ ಶುದ್ಧಿ ಹಾಗೂ ಆಚರಣೆ ಮುಖ್ಯವೆಂದು ಪ್ರತಿಪಾದಿಸಲಾಗಿದೆ.

**"ಉತ್ಸವವು ನಮಗೇತಕೋ**
**ನಮಗಿನ್ನು ಹುಚ್ಚಾಗಿ ತೋರುತಿಹುದು**
**ಇಚ್ಚೆಯಿಲ್ಲದ ಮನಕೆ ಉತ್ಸವವುಬೇಕೆಂಬ**
**ಹುಚ್ಚಣ್ಣಗಳು ಕೇಳಿರೋ**
**ಕಾಲುಕೈ ಕಣ್ಣಿಲ್ಲವೆ ನಮಗಿನ್ನು**
**ಮೂಗು ಕಿವಿ ಬಾಯಿಲ್ಲವೋ**
**ವಾಸನೆಯು ಎಂತೆಂಬ ಘಾಸಿ ನಮಗೇನಿಲ್ಲ**
**ಜೀವದಾಶ್ರಯವುಇರುವ"[7]**

ಅದ್ದೂರಿಯಾಗಿ ಹಬ್ಬ–ಉತ್ಸವಗಳನ್ನು ಆಚರಿಸುವುದನ್ನು ಇಲ್ಲಿ ಖಂಡಿಲಾಗಿದೆ. ಆಧ್ಯಾತ್ಮವನ್ನು ಸಾಧಿಸಬೇಕಾದರೆ ಕೆಲವು ಆಚರಣೆಗಳು ಅಗತ್ಯವಾದರೂ ಸಹ ಅವು ಆಡಂಬರದ ವೈಭೋಗದ ಆಚರಣೆಗಳಾಗಬಾರದು. ಅನುಭಾವದ ದಾರಿಯಲ್ಲಿ ನಡೆಯವವನಿಗೆ ಬಾಹ್ಯಾಚರಣೆಗಳಿಗಿಂತ ಅಂತರಂಗ ಶುದ್ಧಿ ಅತ್ಯಗತ್ಯ. ಇಂಥ ಸಾಧಕನಿಗೆ ಪಂಚೇಂದ್ರಿಯಗಳ ಯಾವ ಅನುಭವವೂ ಆಗುವುದಿಲ್ಲ. ನೋಡುವ ಲೌಕಿಕದ ಯಾವ ಸೌಂದರ್ಯವೂ ಸುಂದರವಾಗಿ ಕಾಣುವುದಿಲ್ಲ. ಅದರ ಬದಲು ಅವನ ಒಳಗಣ್ಣಿನಿಂದ ನೋಡಿದಾಗ ಸಿಗುವ ಆನಂದವೇ ನಿಜವಾದ ಅನುಭವವಾಗಿದೆ. ಹಾಗೆಯೇ ಅನುಭಾವಿಗೆ ಅರಿಷಡ್ವರ್ಗಗಳ ಯಾವ ಭಯವೂ ಇರುವುದಿಲ್ಲ. ಸಾಧಕನು ಕ್ಷಣಿಕವಾದ ಲೌಕಿಕ ಜೀವನದ ಸುಖಕ್ಕಿಂತ ಪಾರಮಾರ್ಥಿಕ ಸುಖಕ್ಕಾಗಿ ಹಂಬಲ ಹೊಂದಿರುತ್ತಾನೆ. ಅದಕ್ಕಾಗಿ ಎಲ್ಲಾ ರೀತಿಯ ಸಂಕೋಲೆಗಳನ್ನು ಕಡಿದುಕೊಂಡು ಪರಮಾತ್ಮನೊಂದಿಗೆ ಅನುಸಂಧಾನ ನಡೆಸಿ ಐಕ್ಯನಾಗುತ್ತಾನೆ ಎಂಬ ಆಶಯವನ್ನು ಇಲ್ಲಿ ಅಭಿವ್ಯಕ್ತಿಸಲಾಗಿದೆ.

**"ಊರ ದೇವರ ಮಾಡಬೇಕಣ್ಣ ಈ**
**ಊರವಳಗೆ ಗಂಗದೇವರ ನಿಲಿಸಬೇಕಣ್ಣ ॥ಪ॥**
**ಪಂಥವೆಂಬೊ ಪತ್ರೆ ತಂದು**
**ಗುಪ್ತವೆಂಬೊ ಗುಡಿಯ ಕಟ್ಟಿ**
**ಜ್ಞಪ್ತಿಯೆಂಬೊ ಗಂಗದೇವಿಗೆ**
**ಆತ್ಮಯೆಂಬೊ ಪೂಜೆ ಮಾಡಿ ॥**
**ಕೋಪವೆಂಬೊ ಕೋಣ ತಂದು**
**ಗಂಗದೇವಿ ಮುಂದೆ ನಿಂದು**
**ಜ್ಞಾನಯೆಂಬೊ ಖಡ್ಗದಿಂದ**
**ಅಲಿಅಲಿ ಬಲಿ ನರಕಬೇಕು ॥"[8]**

ಈ ಮೇಲಿನ ತತ್ವಪದದಲ್ಲಿ ಗ್ರಾಮದೇವತೆ ಹಬ್ಬದ ನೆಪದಲ್ಲಿ ಪ್ರಾಣಿಬಲಿ ಕೊಡುವುದನ್ನು ಕಂಡು ವಿಡಂಬಿಸಲಾಗಿದೆ. ದೇವಿಗೆ ಭಕ್ತಿಭಾವದಿಂದ ಬಲಿಕೊಟ್ಟು ಉತ್ಸವದ ಆಚರಣೆ ಮಾಡುತ್ತಾರೆ. ತಮ್ಮ ಅಂತರಂಗದಲ್ಲಿನ ಕಲ್ಮಶಗಳನ್ನು ಶುದ್ಧಿ ಮಾಡುವುದೇ ನಿಜವಾದ ಹಬ್ಬ. ಇದರ ಆಚರಣೆ ಮಾಡಬೇಕೆಂದು ಇಲ್ಲಿ ತಿಳಿಸಲಾಗಿದೆ. 'ಪಂಥ'ವೆಂಬ ಪತ್ರೆಯನ್ನು ತಂದು ಅಂತರಂಗದಲ್ಲಿ ಗುಡಿಯನ್ನು ಕಟ್ಟಿ ಜ್ಞಾನ, ಸ್ತುತಿಯೆಂಬ ಗಂಗಾದೇವಿಗೆ ಆತ್ಮವೆಂಬ ಪೂಜೆಯನ್ನು ಮಾಡಬೇಕು. 'ಕೋಪ'ವೆಂಬ 'ಕೋಣ'ವನ್ನು ತಂದು ಜ್ಞಾನವೆಂಬ ಖಡ್ಗದಿಂದ ಬಲಿ ನೀಡಬೇಕು. ಹಾಗೆಯೇ 'ತಾಮಸ'ವೆಂಬ ಟಗರನ್ನು, ಕಾಮ, ಕ್ರೋಧಗಳನ್ನು ನಾಶಮಾಡಬೇಕು. ಆ ಮೂಲಕ ಅಂಗದಲ್ಲಿಯೇ ಲಿಂಗವನ್ನು ನೋಡಿ ಗಂಗಾದೇವಿಯ ಪೂಜೆಯನ್ನು ಮಾಡಬೇಕು. ಆತ್ಮದಲ್ಲಿ ಗಂಗಾದೇವಿಯನ್ನು ಕಂಡು ಮುಕ್ತಿ ಪಡೆಯಬೇಕು ಎಂಬುದನ್ನು ಇಲ್ಲಿ ಚಿತ್ರಿಸಲಾಗಿದೆ. ಒಟ್ಟಾರೆ ಬಾಹ್ಯ ಆಚರಣೆಗಿಂತ ಅಂತರಂಗದ ಆಚರಣೆ ಮುಖ್ಯವೆಂಬುದು ಈ ತತ್ತ್ವಪದದ ಆಶಯವಾಗಿದೆ.

**"ಐಸುರ ಛೇ ಇದು ಏನು**
**ಮೋಹರಮ್ಮದ್ದಬ್ಬ**
**ಮಾಡಿ ಧೀನ್ ಧೀನ್ ಅಂಬರು ॥ಪ॥**
**ಕೈಲೆ ಕೈವಾಲಿ ಕಟ್ಟಿ**
**ತಗಡಿನಸ್ತವನಿಟ್ಟು**
**ಶಾಸ್ತ್ರ ಧರ್ಮವ ಬಿಟ್ಟ**
**ಅಲ್ಬೀದಾ ಅಳುತಿತ್ತು**
**ಸತ್ತದೇವರ ಹೊತ್ತ**
**ತುರುಕರಿಗೆಲ್ಲೋ ಗೊತ್ತು"[9]**

ಮೊಹರಂ ಹಬ್ಬದ ಆಚರಣೆಯನ್ನು ಕುರಿತು ಕಟ್ಟಿದ ತತ್ತ್ವಪದ ಇದಾಗಿದೆ. ಮೊಹರಂ ಆಚರಣೆಯ ಸಂದರ್ಭದಲ್ಲಿ ಪಂಜೆ-ತಾಬೂತುಗಳನ್ನು ಮಸೀದಿಯಲ್ಲಿ ಪ್ರತಿಷ್ಠಾಪಿಸಿ ಬೆಲ್ಲ, ಸಕ್ಕರೆ ಮುಂತಾದವುಗಳನ್ನು ನೈವೇದ್ಯ ಮಾಡುವುದನ್ನು ಖಂಡಿಸಲಾಗಿದೆ. ಮೂಲತಃ ಶೋಕ ಪ್ರಧಾನವಾದ ಮೊಹರಂ ಹಬ್ಬವನ್ನು ಸಂಭ್ರಮ, ಸಡಗರಗಳಿಂದ ಆಚರಿಸುವುದು ತತ್ತ್ವಪದಕಾರರಿಗೆ ಕಂದಾಚಾರವಾಗಿ ಕಂಡಿದೆ. ಮುಲ್ಲಾ-ಮೌಲವಿಗಳು ಈ ಹಬ್ಬದ ನಿಜವಾದ ಸತ್ಯವನ್ನು ತಿಳಿದು ಸಾರಬೇಕು. ಆ ಮೂಲಕ ಆಚರಣೆಯನ್ನು ಮಾಡಬೇಕೆ ವಿನಃ ವಿಕೃತ ರೂಪದಲ್ಲಿ ಹಬ್ಬಗಳನ್ನು ಆಚರಿಸಬಾರದು. ಇದರಲ್ಲಿ ಯಾವುದೇ ಅರ್ಥವಿಲ್ಲ ಎಂದು ಈ ತತ್ತ್ವಪದದಲ್ಲಿ ಪ್ರತಿಪಾದಿಸಲಾಗಿದೆ.

ಹೀಗೆ ಹಲವಾರು ತತ್ತ್ವಪದಕಾರರು ಹಬ್ಬ–ಆರಾಧನೆಗಳನ್ನು ಕುರಿತು ತಮ್ಮ ತತ್ತ್ವಪದಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಹಬ್ಬಗಳು ಕೇವಲ ಕಂದಾಚಾರ ಹಾಗೂ ಮೌಢ್ಯತೆಗಳಿಂದ ಮುಂದುವರೆಯಬಾರದು. ಅದರ ಆಚರಣೆಯ ಸತ್ಯಾಸತ್ಯತೆ ಹಾಗು ಅಗತ್ಯತೆಯನ್ನು ಅರಿಯಬೇಕು. ಆ ಮೂಲಕ ಹಬ್ಬ ಮುಂತಾದ ಆಚರಣೆಗಳಿರಬೇಕು ಎಂದಿದ್ದಾರೆ. ಕೆಲವು ತತ್ತ್ವಪದಕಾರರು ಬಾಹ್ಯ ಆಚರಣೆಗಳಿಗಿಂತ ಅಂತರಂಗದ ಶುದ್ಧಿ ಹಾಗೂ ಆಚರಣೆಗಳೇ ಶ್ರೇಷ್ಠವೆಂದು ಸಾರಿದ್ದಾರೆ. ವೈಭೋಗ, ಆಡಂಬರದಿಂದ ಕೂಡಿದ ಆಚರಣೆಗಳು ಅಪ್ರಯೋಜಕವಾದವು. ಎಲ್ಲರಿಗೂ ಒಳಿತನ್ನೇ ಬಯಸುವ ಆಚರಣೆಗಳು ಸದಾ ಕಾಲ ಜರುಗಬೇಕು ಎಂದು ಬೋಧಿಸಿದ್ದಾರೆ.

**ಕಂದಾಚಾರಗಳ ವಿರೋಧ :**

ಸಮಾಜದಲ್ಲಿ ಹಲವು ಮತ, ಸಂಪ್ರದಾಯ, ಜಾತಿ, ಸಮುದಾಯಗಳ ಹಿನ್ನೆಲೆಯ ವಿಶಿಷ್ಟ ನಂಬಿಕೆ ಮತ್ತು ಸಂಪ್ರದಾಯಗಳಿರುತ್ತವೆ. ಅನೇಕ ವೇಳೆ ಅವು ಮೌಢ್ಯತೆಯಿಂದ ಕೂಡಿದ್ದು ಕಂದಾಚಾರಗಳ ಸೃಷ್ಟಿಯಾಗುತ್ತವೆ.ಅರ್ಥವಿಲ್ಲದ ಸಂಪ್ರದಾಯ, ವೈಜ್ಞಾನಿಕವಾಗಿ ಸಮರ್ಥಿಸಲಾಗದ ಮೂಢನಂಬಿಕೆಯಂತಹ ಗೊಡ್ಡು ಆಚರಣೆಯ ವಿರುದ್ಧ ಅನೇಕ ತತ್ತ್ವಪದಕಾರರು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. ಸಾಮಾಜಿಕ ಮೌಲ್ಯಗಳ ಬಗ್ಗೆ ಅತ್ಯಂತ ಕಳಕಳಿಯಿಂದ ಅನೇಕ ತತ್ತ್ವಪದಗಳನ್ನು ಕಟ್ಟಿ ಹಾಡಿದ್ದಾರೆ. ಅನೇಕ ಅನಿಷ್ಟ ಪದ್ಧತಿಗಳನ್ನು ಕಟುವಾಗಿ ಟೀಕಿಸಿದ್ದಾರೆ. ಕಂದಾಚಾರಗಳಿಂದ ಮನುಷ್ಯನ ಅಧೋಃಗತಿಯ ಹಾದಿ ಸೃಷ್ಟಿಯಾಗುತ್ತದೆ ಎಂದು ತಿಳಿ ಹೇಳಿದ್ದಾರೆ.

ಪರಂಪರಾನುಗತವಾಗಿ ಹಿರಿಯರಿಂದ ಆಚರಿಸಿಕೊಂಡು ಬಂದದ್ದೆಲ್ಲವೂ ಶ್ರೇಷ್ಠವಾದುದು ಎಂಬ ನಂಬಿಕೆಯಿಂದ ಮೌಢ್ಯಾಚರಣೆಗಳು ಸಮಾಜದಲ್ಲಿ ಬೇರೂರುತ್ತವೆ. ಪೀಳಿಗೆಯಿಂದ ಪೀಳಿಗೆಗೆ ಸಾಗಿಬರುತ್ತವೆ. “ಹಿಂದಿನ ಸಂಪ್ರದಾಯಗಳೆಲ್ಲವೂ ಶ್ರೇಷ್ಠವಲ್ಲ, ಹಾಗೆಯೇ ಕನಿಷ್ಟವೂ ಅಲ್ಲ. ಭತ್ತದ ತೆನೆಯಲ್ಲಿ ಜೊಳ್ಳು ಮತ್ತು ಕಾಳುಗಳು ಸೇರಿಕೊಳ್ಳುವಂತೆ, ಸಂಪ್ರದಾಯದಲ್ಲಿ ಕೆಲವು ಮೌಢ್ಯತೆಯ ಆಚರಣೆಗಳು ಅಪ್ರಯತ್ನ ಪೂರ್ವಕವಾಗಿಯೇ ಸೇರಿಕೊಳ್ಳುತ್ತವೆ”[10] ಎಂಬ ಅಭಿಪ್ರಾಯ ಸೂಕ್ತವಾದುದಾಗಿದೆ. ಇವುಗಳನ್ನು ಕುರಿತು ಅನುಭಾವಿಗಳು, ವಿಚಾರವಾದಿಗಳು ಅರಿವನ್ನು ಮೂಡಿಸಲು ಪ್ರಯತ್ನಿಸಿದ್ದಾರೆ. ತತ್ತ್ವಪದಕಾರರು ಇಸ್ಲಾಂ ಧರ್ಮದಲ್ಲಿದ್ದ ಕೆಲವು ಮೌಢ್ಯಾಚರಣೆ ಕುರಿತು ಟೀಕಿಸಿದ್ದಾರೆ. ಮೊಹರಂ ಹಬ್ಬದ ಆಚರಣೆಯಲ್ಲಿ ನಡೆಯುವ ಕಂದಾಚಾರಗಳನ್ನು ಖಂಡಿಸಿದ್ದಾರೆ. ಫಕೀರರಾಗಿ ಮನೆ–ಮನೆಗೆ ಹೋಗಿ ಭಿಕ್ಷೆ ಬೇಡುವುದು, ದೇಹಕ್ಕೆ ಹರಿತವಾದ ಆಯುಧಗಳಿಂದ ಹಲ್ಲೆ ಮಾಡಿಕೊಳ್ಳುವುದು, ಸಿಡಿ ಚುಚ್ಚಿಕೊಳ್ಳುವುದು ಮುಂತಾದ ಅಮಾನವೀಯ ಆಚರಣೆಗಳನ್ನು ಕಂಡು ಕಿಡಿಕಾರಿದ್ದಾರೆ. ಇವೆಲ್ಲವೂ ಪಟ್ಟಭದ್ರರು ಮುಗ್ಧಜನರನ್ನು ನಂಬಿಸಿ ಮೋಸಗೊಳಿಸಿ, ಅಮಾಯಕರಿಂದ ಮಾಡಿಸುತ್ತಿರುವ ತಂತ್ರಗಳು ಎಂದು ಜರಿಯುತ್ತಾರೆ. ಮುಸ್ಲಿಂ ಧರ್ಮದಲ್ಲಿ ಮೂರ್ತಿ ಪೂಜೆಗೆ ಅವಕಾಶವಿಲ್ಲ. ಆದರೂ ಮೊಹರಂ

ಹಬ್ಬದ ಸಂದರ್ಭದಲ್ಲಿ ಪಂಜೆ ತಾಂಬೂತು ಪ್ರತಿಷ್ಠಾಪಿಸಿ ಅದಕ್ಕೆ ನೈವೇದ್ಯ, ಪೂಜೆ ಮಾಡುವುದನ್ನು ಟೀಕಿಸಿದ್ದಾರೆ.

**"ಮಾಡಬಾರ್ದೋ ಈ ಮೊಹರಮದ್ಹಬ್ಬ**
**ಮಾಡಲಿದು ಕೇಡಲಿದು ಕಾಡಕರ್ಬಲ**
**ಕಡಿದಾಡುವ ಹಬ್ಬ ಮಾಡಬಾರ್ದೋ।**
**ಕತ್ತಲ ಶಹಾದತ್ತು ಮತನದೋನ್ಮತಗತಿ**
**ಶರಣರ ಸಮ್ಮತವಾಗದ ಹಬ್ಬ ಮಾಡಬಾರ್ದೋ**
**ತಾನೇ ಶಿಶುವಿನಾಳ ಜ್ಞಾನದಲಾವಿಯ**
**ಮೌನ ರಿವಾಯತ ಮಂತ್ರ ಓದಿ ಹಬ್ಬ ಮಾಡಬಾರ್ದೋ"[11]**

ಮೂಲತಃ ಧರ್ಮಕ್ಕೆ ವಿರುದ್ಧವಾದ ಈ ರೀತಿಯ ಆಚರಣೆಗಳನ್ನು ಮಾಡಬಾರದು. ಇದು ಮಾನವರ ನಡುವೆ ಬಾಂಧವ್ಯವನ್ನು ಬೆಸೆಯುವ ಬದಲು ಹೊಡೆದಾಡುವ ಪ್ರವೃತ್ತಿಯನ್ನು ಹುಟ್ಟು ಹಾಕುತ್ತದೆ. ಪಟ್ಟಭದ್ರ ಹಿತಾಶಕ್ತಿಗಳು ತಮ್ಮ ಹೊಟ್ಟೆಯನ್ನು ಹೊರೆಯುವುದಕ್ಕಾಗಿ ಇಂತಹ ಕಂದಾಚಾರದ ಆಚರಣೆಯನ್ನು ಸೃಷ್ಟಿಸಿದ್ದಾರೆ. ಆ ಮೂಲಕ ಅಮಾಯಕರನ್ನು ಶೋಷಣೆಗೀಡು ಮಾಡುತ್ತಾರೆ. ಶೋಕ ಪ್ರಧಾನವಾದ ಮೊಹರಂ ಹಬ್ಬವನ್ನು ವಿಕೃತ ರೂಪದಲ್ಲಿ ಆಚರಿಸುವುದಕ್ಕೆ ಕೆಲವು ಕುತಂತ್ರಿಗಳೇ ಕಾರಣವೆಂದು ವಿಡಂಬಿಸಿ, ಅನಾಚಾರದ ಪ್ರತೀಕವಾದ ಈ ಆಚರಣೆ ಸಲ್ಲದು ಎಂದು ಇಲ್ಲಿ ಸಾರಿದ್ದಾರೆ. ಅಂತೆಯೇ ಜಾತಿ, ಕುಲ, ಮಡಿ–ಮೈಲಿಗೆ, ಶ್ರೇಷ್ಠ–ಕನಿಷ್ಠ ಮುಂತಾದವುಗಳ ಕುರಿತು ಅನೇಕ ತತ್ತ್ವಪದಗಳು ಕನ್ನಡದಲ್ಲಿ ರಚನೆಗೊಂಡಿವೆ.

**"ಏನು ಮೀಸಲು ಒಯ್ಯಲಿ, ದೇವರಿಗೆ**
**ನಾನ್ಯಾವ ಅಂಬಲಿ ಕಾಯಿಸಲಿ ॥ಪ॥**
**ಒಲೆಯ ಹೊತ್ತಲಿಟ್ಟು ನಾನು**
**ಹೊಳೆಯ ನೀರಿಗೆ ಹೋದೆನೋ**
**ಹೊಳೆಯ ಮೀನು ಕೊಡದಿ ಬಿದ್ದು**
**ನೀರಮೈಲಿಗೆ ಮಾಡಿತೋ ॥**
**ಅದ್ದನಕ್ಕಿಯ ತಂದೆನೋ**
**ಒದ್ದೆಯಿಂದ ಮಾಡಿದೆನೊ**
**ಬಿದ್ದಿತೊಂದು ನೊಣವು**
**ಬಂದು ಅನ್ನ ಮೈಲಿಗೆ ಆಯಿತೊ॥"[12]**

ಸಮಾಜದಲ್ಲಿ ವಾಸಿಸುವ ಜನರು ತಮ್ಮ ಜೀವನದ ಭಾಗವಾಗಿ ಅನೇಕ ವ್ರತಾಚರಣೆ, ಪೂಜೆ, ಹರಕೆ ಮುಂತಾದ ಕಟ್ಟುಪಾಡುಗಳಲ್ಲಿ ಕಟ್ಟು ಬೀಳುತ್ತಾರೆ. ಮಡಿ–ಮೈಲಿಗೆ, ಉಪವಾಸ ಮುಂತಾದ ಸಂಪ್ರದಾಯಗಳನ್ನು ಪಾಲಿಸುತ್ತಾರೆ. ದೇವರ ಪೂಜೆಗಳಲ್ಲಿ ಮುಖ್ಯವಾಗಿ ಮಡಿ–ಮೈಲಿಗೆಯನ್ನು ಅನುಸರಿಸುತ್ತಾರೆ. ದೇವರಿಗೆ ಮಾಡುವ ನೈವೇದ್ಯವು ಮೈಲಿಗೆಯಾಗದಂತೆ ನೋಡಿಕೊಳ್ಳುತ್ತಾರೆ. ಇಂಥಹ ಕಂದಾಚಾರಿಗಳನ್ನು ಕಂಡ ಅನೇಕ ಅನುಭಾವಿಗಳು ಕಿಡಿಕಾರಿದ್ದಾರೆ. ದೇವರ ಅಭಿಷೇಕಕ್ಕೆಂದು ತರುವ ನೀರು ಮೀನಿನಿಂದ ಮೈಲಿಗೆಯಾಗುತ್ತದೆ. ನದಿ, ಹೊಳೆಯಿಂದ ಪರಿಶುದ್ಧ ಜಲವೆಂದು ತರುವ ಅವುಗಳು ಜಲಚರ ಪ್ರಾಣಿಗಳ ಎಂಜಲಾಗಿರುತ್ತದೆ. ಅಂದರೆ ಮೈಲಿಗೆಯಾಗಿರುತ್ತದೆ. ಅಂತೆಯೇ ದೇವರ ನೈವೇದ್ಯಕ್ಕೆಂದು ಅನ್ನ ಮಾಡಿ ಪ್ರಸಾದವೆಂದು ತರುವಾಗ ಅದಕ್ಕೆ ನೊಣ ಬಿದ್ದು ಮೈಲಿಗೆಯಾಗುತ್ತದೆ. ಹಾಗೆಯೇ ಎಲ್ಲಾ ಆಹಾರ ಪದಾರ್ಥಗಳಲ್ಲಿಯೂ ಸಹಜವಾಗಿ ಕ್ರಿಮಿ, ಕೀಟ, ಹುಳಗಳು ಇದ್ದೇ ಇರುತ್ತವೆ. ಈ ವಾಸ್ತವವನ್ನು ತಿಳಿಯದೇ ನೊಣ ಬಿದ್ದ ಮಾತ್ರಕ್ಕೆ ಮೈಲಿಗೆಯಾಯಿತು ಎನ್ನುವುದು ಸರಿಯಲ್ಲ ಎಂದು ಈ ತತ್ತ್ವಪದದಲ್ಲಿ ವಾದಿಸಲಾಗಿದೆ. ಅಂತೆಯೇ ದೇವರನ್ನು ಪೂಜಿಸಬೇಕು ಅಥವಾ ಒಲಿಸಿಕೊಳ್ಳಬೇಕೆಂದರೆ ಬಾಹ್ಯ ಮಡಿ ಇದ್ದರೆ ಸಾಲದು. ಅಂತರಂಗದ ಮಡಿ ಅಂದರೆ ಮನಸ್ಸಿನ ಮಡಿಯನ್ನು ಸಾಧಿಸಬೇಕು. ಬಾಹ್ಯ ಶುದ್ಧಿಗಿಂತ ಅಂತರಂಗದ ಶುದ್ಧಿ ನಿಜವಾಗಿ ಶ್ರೇಷ್ಠವಾದುದಾಗಿದೆ ಎಂಬುದನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

ನಾಗರ ಪಂಚಮಿಯ ಹಬ್ಬವು ನಮ್ಮ ನಾಡಿನ ಸಂಪ್ರದಾಯಗಳಲ್ಲಿ ಒಂದಾಗಿದೆ. ಈ ಹಬ್ಬದಲ್ಲಿ ಮೌಢ್ಯತೆಯ ಕೂಪದಲ್ಲಿ ಬಿದ್ದಿರುವ ಜನರು ಕಲ್ಲು ನಾಗರಹಾವಿಗೆ ಹಾಲನ್ನು ಎರೆಯುವ ಡಾಂಭಿಕರ ಕಂದಾಚಾರವನ್ನು ತತ್ತ್ವಪದಕಾರರು ಖಂಡಿಸಿದ್ದಾರೆ. ಕಲ್ಲಿನ ನಾಗನಿಗೆ ಹಾಲನೆರೆಯುವ ಇದೇ ಜನರು ದಿಟದ ನಾಗರಹಾವು ಬಂದಾಗ ಕೊಲ್ಲುತ್ತಾರೆ. ಇಂತಹ ಕಂದಾಚಾರಿಗಳನ್ನು ಕಂಡು ಅನೇಕ ಅನುಭಾವಿಗಳು ಕೆಂಡಮಂಡಲವಾಗುತ್ತಾರೆ. ಇಂತಹ ಅನೈತಿಕ ಸಂಪ್ರದಾಯದ ವಿರುದ್ಧ ಸಿಡಿದೆದ್ದಾರೆ.

**"ದೇವರಿಗೆಂತ ಹೋಗುತಾರೆ**
**ದೇವರು ಪೂಜೆ ಮಾಡುತಾರೆ**
**ಕನಸಿನಲ್ಲಿ ದೇವರು ಬಂದರೆ**
**ದೆವ್ವ ಬಂದಿದೆ ಅಂತಾರೆ**
**ನಾಗರ ಪಂಚಮಿ ಬಂದರೆ**
**ಕಲ್ಲು ನಾಗಪ್ಪನಿಗೆ ಹಾಲು ಎರೀತಾರೆ**
**ನಾಗರಹಾವು ಬಂದರೆ**
**ಕಲ್ಲಿನಿಂದ ಕೊಲ್ಲುತ್ತಾರೆ"**[13]

ಜನರಲ್ಲಿರುವ ಅಂಧಕಾರದ ಕುರಿತು ಈ ತತ್ವಪದದಲ್ಲಿ ವಿಡಂಬಿಸಿದ್ದಾರೆ. ಮೌಢ್ಯದ ಆಚರಣೆಗೆ ಪ್ರೋತ್ಸಾಹ ನೀಡುವವರನ್ನು ಹೀಗಳೆದಿದ್ದಾರೆ. ಇಂತಹ ಅವೈಜ್ಞಾನಿಕ ಅಚರಣೆಗಳಿಂದಾಗಿ ಅಭಿವೃದ್ಧಿ ಎಂದಿಗೂ ಸಾಧ್ಯವಿಲ್ಲ ಎಂಬುದನ್ನು ಬೋಧಿಸಿದ್ದಾರೆ. ಇಂಥ ಕಂದಾಚಾರಗಳಿಗೆ ಬಲಿಯಾಗದೆ ಗುರು ತೋರಿದ ಹಾದಿಯಲ್ಲಿ ಸದಾಚಾರದೊಂದಿಗೆ ನಡೆದರೆ ಮೋಕ್ಷ ದೊರಕುತ್ತದೆ ಎಂದು ಸಾರಿದ್ದಾರೆ.

ಜನಪದರ ಆಚರಣೆಯ ಭಾಗವಾಗಿ ಕಂಡುಬರುವ ಹಬ್ಬ –ಹರಿದಿನಗಳ ಹಿನ್ನೆಲೆಯನ್ನು ಮೊದಲು ತಿಳಿಯಬೇಕು.ಆ ಪರಂಪರೆಯನ್ನು ಮುಂದುವರೆಸುವಾಗಲೂ ಆಚರಣೆಯ ಸತ್ಯಾಸತ್ಯತೆಯನ್ನು ಮನಗಾಣಬೇಕು. ಆನಂತರ ಅದರ ಆಚರಣೆಯನ್ನು ಮಾಡಬೇಕು. ಇವುಗಳು ಕೇವಲ ಬಾಹ್ಯ ಆಡಂಬರದ, ತೋರಿಕೆಯ ಕ್ರಿಯೆಗಳಾಗಬಾರದು. ಇಂಥಹ ಆಚರಣೆಗಳಿಂದ ಸಮಾಜದ ಎಲ್ಲಾ ಸಮುದಾಯಕ್ಕೆ ಒಳಿತಾಗಬೇಕು. ಯಾರ ಪಾಲಿಗೂ ಅದು ತೊಂದರೆಯನ್ನು ಉಂಟುಮಾಡಬಾರದು. ಮೌಢ್ಯತೆಯನ್ನು ಬಿತ್ತಿ ಹಾದಿ ತಪ್ಪಿಸುವ ಕೆಲಸ ಮಾಡಬಾರದು. ಅಮಾಯಕ ಮುಗ್ಧ ಮನಸ್ಸುಗಳ ಮೇಲೆ ಕೆಟ್ಟ ಪರಿಣಾಮವನ್ನು ಉಂಟುಮಾಡಬಾರದು. ಈ ಎಲ್ಲಾ ಗುಣಾತ್ಮಕವಾದ ಸಂದೇಶಗಳನ್ನು ಅನೇಕ ತತ್ವಪದಕಾರರು ತಮ್ಮ ತತ್ವಪದಗಳಲ್ಲಿ ಪ್ರತಿಪಾದಿಸಿದ್ದಾರೆ. ಮೌಢ್ಯತೆ, ಹಿಂಸೆ ಮುಂತಾದ ಕಂದಾಚಾರ ಆಚರಣೆಗಳ ವಿರುದ್ಧ ಕಿಡಿಕಾರಿದ್ದಾರೆ.

**ಜಾತ್ರೆಗಳು :**

ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಆಚರಿಸುವಂತೆಯೇ ಚಾಮರಾಜನಗರ ಪ್ರದೇಶದಲ್ಲಿಯೂ ಜಾತ್ರೆಗಳು ನಡೆಯುತ್ತವೆ. ಇಲ್ಲಿ ನಡೆಯುವ ಅನೇಕ ಜಾತ್ರೆಗಳಲ್ಲಿ ಎಲ್ಲಾ ಧರ್ಮದ, ಎಲ್ಲಾ ಜನ ಸಮುದಾಯಗಳ ಜನರು ಪಾಲ್ಗೊಳ್ಳುತ್ತಾರೆ. ಇಂಥ ಜಾತ್ರೆಗಳು ಸಾಮರಸ್ಯ ಮತ್ತು ಸಮನ್ವಯತೆಯನ್ನು ಸಾರುತ್ತವೆ. ಧಾರ್ಮಿಕ ಹಿನ್ನೆಲೆಯ ಮಠಮಾನ್ಯಗಳು ಹಾಗೂ ದೇವಾಲಯಗಳು ನಡೆಸುವ ಜಾತ್ರೆ ಒಂದು ತೆರನಾದರೆ, ಸಾಂಸ್ಕೃತಿಕ ನಾಯಕರು, ಸಾಧು ಸಂತರು, ಅನುಭಾವಿಗಳ ಹೆಸರಿನಲ್ಲಿಯೂ ಜಾತ್ರೆಗಳು ನಡೆಯುತ್ತವೆ. ಇಂತಹ ಜಾತ್ರೆಗಳು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿವೆ. ಅನೇಕ ಜಾತ್ರೆಗಳನ್ನು ಕುರಿತು ಹಲವಾರು ತತ್ವಪದಕಾರರು ತತ್ವಪದಗಳನ್ನು ರಚಿಸಿ ಹಾಡಿದ್ದಾರೆ. ಇವುಗಳಲ್ಲಿ ಕೆಲವು ರಚನೆಗಳು ಲೌಕಿಕ ವ್ಯಾಪಾರವನ್ನು ಮಾತ್ರ ಚಿತ್ರಿಸಿದರೆ; ಇನ್ನೂ ಕೆಲವು ಜಾತ್ರೆಯನ್ನು ಪಾರಮಾರ್ಥಿಕ ನೆಲೆಯಲ್ಲಿ ವಿವರಿಸಿವೆ.

ತತ್ತ್ವಪದಕಾರರು ತಮ್ಮ ಜೀವನದ ಎಲ್ಲಾ ಹಂತಗಳಲ್ಲೂ ನಿರಂತರ ಆಧ್ಯಾತ್ಮಿಕ ಸಾಧನೆ ಮಾಡಿ ಉನ್ನತ ಸ್ಥಿತಿಗೆ ತಲುಪಿ ದೈವತ್ವಕ್ಕೇರಿದ್ದಾರೆ. ಅವರ ಗದ್ದುಗೆಗಳು ಓಡಾಡಿದ ಸ್ಥಳಗಳು, ತಪಸ್ಸುಗೈದ ಗವಿಗಳು ಇಂದಿಗೂ ಪೂಜೆಗೊಳ್ಳುತ್ತಿವೆ. ಆರಾಧನೆಯ ಕೇಂದ್ರಸ್ಥಳಗಳಾಗಿವೆ. ಇವುಗಳ ಸುತ್ತಾ ಅನೇಕ ಪವಾಡದ ಕಥೆಗಳು ಹೆಣೆದುಕೊಂಡಿವೆ. ಹೀಗಾಗಿ ತತ್ತ್ವಪದಕಾರರು ಹಳ್ಳಿಗಳಲ್ಲಿ ವಾಸವಿರುವ

ಜನಸಮುದಾಯದವರ ಪಾಲಿಗೆ ಸಾಂಸ್ಕೃತಿಕ ನಾಯಕರಾಗಿ, ಧಾರ್ಮಿಕ ವ್ಯಕ್ತಿಗಳಾಗಿ, ಪೂಜ್ಯನೀಯ ಸ್ಥಾನ ಗಳಿಸಿದ್ದಾರೆ. ಚಾಮರಾಜನಗರದ ಕುಣಗಳ್ಳಿ ಯರಗಂಬಳ್ಳಿ, ದೊಡ್ಡಮೋಳೆ, ಸತ್ಯಮಂಗಲ ಎಲಕ್ಕೂರು, ಹೊನ್ನೂರು, ಮಧುವನಹಳ್ಳಿ, ಅಂಬಳೆ, ಕಂದಹಳ್ಳಿ ಮದ್ದೂರು, ದೊಡ್ಡಿಂದುವಾಡಿ, ಹೊಂಡರಬಾಳು, ಗಾಜನೂರು, ಹೊಸೂರು ಬಿಸಲವಾಡಿ ಮುಂತಾದ ಕಡೆ ಗುರುನಂಜಪ್ಪಸ್ವಾಮಿ, ಗುರು ಪೇಸಿರ್ಂಗ್‌ಸ್ವಾಮಿ, ರಾಚಪ್ಪಸ್ವಾಮಿ, ಗುರುಲಿಂಗಸ್ವಾಮಿ, ಗುರುಬಸಪ್ಪಸ್ವಾಮಿ ಮುಂತಾದ ತತ್ವಪದಕಾರರ ಹೆಸರಿನಲ್ಲಿ ಆರಾಧನೆ, ಜಾತ್ರೆಗಳು ಪ್ರತಿವರ್ಷ ಜರುಗುತ್ತವೆ. ಇವು ಸಾಂಸ್ಕೃತಿಕ ಸಮನ್ವಯತೆಗೆ ಕಾರಣವಾಗಿವೆ. ಪ್ರತಿ ವರ್ಷ ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಿ ಏಳು ದಿನಗಳವರೆಗೆ ನಡೆಯುವ ಆರಾಧನೆ, ಜಾತ್ರೆಗಳಲ್ಲಿ ಜಾತ್ಯತೀತ, ಧರ್ಮತೀತರಾಗಿ ಜನ ಬಂದು ನೆರೆಯುತ್ತಾರೆ. ಏಳು ದಿನಗಳ ಕಾಲ ಪ್ರತಿದಿನ ಸಂಜೆ 6 ಗಂಟೆಗೆ ಗುರುತತ್ವ ಭಜನೆ ನಡೆಯುತ್ತದೆ. ರಾತ್ರಿಪೂರ ನಡೆಯುವ ಈ ಗುರು ಪಾರಾಯಣದಲ್ಲಿ ಗುರುದೀಕ್ಷೆ ಪಡೆದವರು, ಪಡೆಯದವರೆಲ್ಲರೂ ಒಟ್ಟಾಗಿ ಸೇರುತ್ತಾರೆ. ಸತ್ಸಂಗದಲ್ಲಿ ಪಾಲ್ಗೊಂಡು ಅಲ್ಲಿ ನಡೆಯುವ ತತ್ವ ಚರ್ಚೆಗಳಲ್ಲಿ ಪಾಲ್ಗೊಂಡು ಪುನೀತರಾಗುತ್ತಾರೆ.

**"ತತ್ವ ಚಿಂತನೆ ಮಾಡು ಮನುಜ**
**ವ್ಯರ್ಥ ಕಾಲವ ಕಳೆಯದೆ**
**ಮೃತ್ಯು ಬರುವುದು ಮುಂದೆ**
**ಕೇಳಿರಿ ಮೂಡು ಬಾರಿಗೂ ಸಾರಿದೆ ॥ಪ॥**
**ಮನೆಯು ಹೊತ್ತಿ ಉರಿಯುವಾಗ**
**ಬಾವಿ ತೆಗೆಯುವ ನರನ ತೆರದಿ**
**ಕೊನೆಗೆ ಯಮನವರು ಬಂದು ಎಳೆವಾಗ**
**ಕೂಗಿದರೆ ಸುಖಬಾರದು॥"**[14]

ಮೂರು ದಿನದ ಬದುಕಿನಲ್ಲಿ ನಾನು ನನ್ನದು ಎನ್ನದೇ, ಇರುವಷ್ಟು ದಿನ ಸನ್ಮಾರ್ಗದಲ್ಲಿ ನಡೆದು, ಗುರುಮುಖದಿಂದ ಮೋಕ್ಷ ಸಾಧಿಸಬೇಕು. ಲೋಕದ ಜಂಜಾಟದಲ್ಲಿ ಸಿಲುಕಿ ನಲುಗಿ ಹೋಗದೆ, ಅಂತರಂಗದ ಶುದ್ಧಿಯಿಂದ ಉತ್ತಮರ ಸಂಗ ಮಾಡಿ ತತ್ವಚಿಂತನೆಯಲ್ಲಿ ತೊಡಗಬೇಕು. ಆ ಮುಖಾಂತರ ಜೀವನದ ಸತ್ಯವನ್ನು ಅರಿಯಬೇಕು. ಸಾವಿನಂಚಿನಲ್ಲಿರುವಾಗ ಈ ಸಾಧನೆ ಕಷ್ಟ ಸಾಧ್ಯವಾಗುತ್ತದೆ. ಆದ್ದರಿಂದ ತಡಮಾಡದೆ ಯೋಗ ಸಿದ್ಧಿಯನ್ನು ಪಡೆದು ಮುಕ್ತಿ ಹೊಂದಬೇಕು ಎಂದು ಈ ತತ್ತ್ವಪದದಲ್ಲಿ ಪ್ರತಿಪಾದಿಸಲಾಗಿದೆ.

**"ಇಲ್ಲದಂಗಡಿಯೊಳು ಅಲ್ಲೇನು ವ್ಯಾಪಾರ**
**ಬಲ್ಲವರ ನೀ ಸೇರು ಕುರಿಯೇ**

**ಬಗೆ ಬಗೆ ವರ್ಣದ ಕುರಿಗಳ**

**ಮೇಯಿಸುವ ಕುರುಬನ ನೀ ಸೇರು ಕುರಿಯೇ ॥**

**ಆಳು ತೋಟಕೆ ನೀರುಯೆತ್ತಿ ತೋಳುಗಳು**

**ಬೀಳುಬಿದ್ದಂತಾಯಿತು ಕುರಿಯೆ**

**ಯಮನಾಳುಗಳು ಬಂದು ಎಳೆದು ಕೊಂಡೋಗುವಾಗ**

**ಮಾಳಿಗೆ ಮನೆ ಸೇರು ಕುರಿಯೇ।”**[15]

ಅಶಾಶ್ವತವಾದ ಬದುಕಿನ, ದೇಹದ ಆಸೆಯನ್ನು ತ್ಯಜಿಸಿ, ಪಾರಮಾರ್ಥದ ಕಡೆ ನಡೆಯಬೇಕೆಂಬ ಆಶಯ ಈ ತತ್ವಪದದಲ್ಲಿದೆ. ಮನಸ್ಸನ್ನು ಕುರಿಗೆ ಹೋಲಿಕೆ ಮಾಡಿ ಗುರುವನ್ನು ಕುರುಬನಿಗೆ ಹೋಲಿಸಲಾಗಿದೆ. ಸಾಧಕನಾದವನಿಗೆ ಗುರು ಸರಿದಾರಿಯನ್ನು ತೋರುತ್ತಾನೆ. ಹಾಗಾಗಿ ಗುರು ಸಾಮೀಪ್ಯದಿಂದಲೇ ಶಿಷ್ಯನ ಉದ್ಧಾರ ಸಾಧ್ಯ. ಲೋಕದ ಸುಖದಲ್ಲಿ ಮುಳುಗಿದರೆ ಸಾಧನೆ ಸುಲಭವಾಗಿ ಸಿದ್ಧಿಯಾಗುವುದಿಲ್ಲ. ಆದ್ದರಿಂದ ವಿಷಯಾಸಕ್ತಿಯಿಂದ ಮುಕ್ತನಾದ ಸಾಧಕನು ಮಾತ್ರ ಗುರುವನ್ನು ಪಡೆಯಬಹುದು. ಆ ಮೂಲಕ ಮೋಕ್ಷವನ್ನು ಸಾಧಿಸಬಹುದು ಎಂಬ ತತ್ತ್ವವು ಈ ಪದದಲ್ಲಿದೆ.

**“ಜಾತ್ರೆ ಮಾಡೋಣ ಶಕ್ತಿಗೆ ಜಾತ್ರೆ ಮಾಡೋಣ**

**ಅನುದಿನ ಮನೆಯಲ್ಲಿ ಒಪ್ಪದಿ ಇರುವ**

**ಮುದ್ದಿನ ಮುಕ್ತಿ ಕಾಂತೆ ಶಕ್ತಿಗೆ ॥ಪ॥**

**ಗೂಢವಾದ ಗುಂಡು ಮಲ್ಲಿಗೆ ತಂದು**

**ಪ್ರೇಮದಿ ಶಕ್ತಿಯ ಸಿಂಗರಿಸಿ**

**ಪಂಚಭೂತಗಳ ಬಲಿಯನು ಕೊಟ್ಟು**

**ಪಂಚಾಕ್ಷರದದಿಂದ ಪಾಲಿಸು ಎಂದು ॥”**[16]

ಮೇಲಿನ ತತ್ತ್ವಪದದಲ್ಲಿ ಮುಕ್ತಿ ಕಾಂತೆಯಾದ ಶಕ್ತಿಗೆ ಯಾವ ತೆರನಾದ ಜಾತ್ರೆ ಮಾಡಬೇಕೆಂದು ಅಭಿವ್ಯಕ್ತಿಸಲಾಗಿದೆ. ಇಲ್ಲಿ ಜಾತ್ರೆಯೆನ್ನುವುದು ಬಹಿರಂಗದ ಆಚರಣೆಯಲ್ಲ. ಇದು ಅಂತರಂಗದ ಆಚರಣೆ, ಮನದ ದೀಪವನ್ನಿಟ್ಟು ಹಚ್ಚಿ ಶಕ್ತಿಯ ಮುಂದಿಡಬೇಕು. ಪಂಚಭೂತಗಳನ್ನು ಬಂಧಿಸಿ ಗುರುನಾಮಸ್ಮರಣೆಯಿದ ನಾಶಗೊಳಿಸಬೇಕು. ಈ ರೀತಿಯಾಗಿ ಶಕ್ತಿಯನ್ನು ಆರಾಧಿಸಿ, ಅಂತರಂಗದ ಜಾತ್ರೆಯನ್ನು ಮಾಡಬೇಕು ಎಂದು ಇಲ್ಲಿ ಅಭಿವ್ಯಕ್ತಿಸಲಾಗಿದೆ. ಇಲ್ಲಿ ಜಾತ್ರೆಯೆಂಬುದು ಪಾರಮಾರ್ಥಿಕ ಅರ್ಥ ಸಾಧ್ಯತೆಯನ್ನು ಪಡೆದಿದೆ.

ಹೀಗೆ ತತ್ತ್ವಪದಕಾರರು ಜಾತ್ರೆಗಳನ್ನು ಕುರಿತು ಹಲವಾರು ತತ್ವಪದಗಳನ್ನು ರಚಿಸಿ ಹಾಡಿದ್ದಾರೆ. ನಮ್ಮ ಜನರು ವಿವಿಧ ಸಂದರ್ಭಗಳಲ್ಲಿ ಬದುಕನ್ನು ಎದುರಿಸಿದ ಬಗೆಗೆ, ಅವುಗಳಿಗೆ ಪರಿಹಾರ ರೂಪವಾಗಿ

ಕಂಡುಕೊಂಡ ಆಲೋಚನೆಗಳನ್ನು ತಮ್ಮ ಪದಗಳಲ್ಲಿ ಚಿತ್ರಿಸಿದ್ದಾರೆ. ಏಕಾಂತದಲ್ಲಿ ರಚನೆಗೊಂಡ ಇಂತಹ ತತ್ವಪದಗಳು ಪ್ರಸರಣೆಗೊಂಡದ್ದು ಸಮುದಾಯದ ಮಧ್ಯೆದಲ್ಲಿಯೇ. ಆದ್ದರಿಂದ ಇವುಗಳು ಸಾಮೂಹಿಕ ರಚನೆಗಳೆಂದೇ ಕರೆಸಿಕೊಳ್ಳುತ್ತದೆ. ಒಂದು ಸಮುದಾಯದ ಸಂಸ್ಕೃತಿಯನ್ನು ಗರ್ಭೀಕರಿಸಿಕೊಂಡಿರುವ ಮಾಧ್ಯಮಗಳಾಗಿ, ಈ ತತ್ವಪದಗಳು ನಮ್ಮನ್ನು ಎದುರುಗೊಳ್ಳುತ್ತವೆ. ದೇಶಿಯತೆ ಇವುಗಳ ಮೂಲ ಲಕ್ಷಣ. ದೇಶೀ ಭಾಷೆ, ಛಂದಸ್ಸು, ಲಯ, ದಾಟಿಗಳು ತತ್ವಪದಗಳ ಜೀವಾಳ. ಹೀಗಾಗಿ ಅನೇಕ ಜನಪದ ಮಟ್ಟುಗಳು ಇಲ್ಲಿ ಬಳಕೆಯಾಗಿವೆ. ಅವು ಅನುಭಾವ, ಆಧ್ಯಾತ್ಮದ ಅಭಿವ್ಯಕ್ತಿಗೆ ತಮ್ಮನ್ನು ಆತ್ಮೀಯವಾಗಿ ಒಪ್ಪಿಕೊಂಡಿವೆ. ಇಂತಹ ತತ್ತ್ವಪದಗಳನ್ನು ಮೇಲೆ ಉದಾಹರಿಸಿದಂತೆ ಆಚರಣಾತ್ಮಕ ನೆಲೆಯಲ್ಲಿಯೂ ಗುರುತಿಸಬಹುದಾಗಿದೆ. ವಿಶೇಷ ಜಾತ್ರೆ, ಹಬ್ಬ–ಹರಿದಿನ, ಉರುಸ್ ಮುಂತಾದ ಸಂದರ್ಭಗಳಲ್ಲಿ ಕಂಡುಬರುವ ಕೋಲುಪದ, ಲಾಲಿಪದ, ಭಜನೆ, ಉಯ್ಯಾಲೆಪದ, ಮಂಗಳಾರತಿಪದ ಮೊದಲಾದವುಗಳು ಇಲ್ಲಿ ಪ್ರಮುಖವಾದವುಗಳಾಗಿವೆ.

**ಕೊನೆ ಟಿಪ್ಪಣಿಗಳು**

೧. ಶಿವಪ್ರಕಾಶ್,ಎಚ್.ಎಸ್–ತತ್ವಪದಗಳು–ಪ್ರಸ್ತಾವನೆ–vii-ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು–1998

೨. ಅದೇ, ಪ್ರಸ್ತಾವನೆ–vii

೩. ಶಾಂತರಸ(ಪ್ರ.ಸಂ)–ತತ್ವಪದಗಳು–ಪ್ರಾತಿನಿಧಿಕ ಸಂಕಲನ–ಪುಟ–xv–ಕರ್ನಾಟಕ ಸಾಹಿತ್ಯ ಅಕಾಡೆಮಿ–ಬೆಂಗಳೂರು, 2000

೪. ಅದೇ ಪುಟ–xv

೫. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಯರಗಂಬಳ್ಳಿಯ ಯಲ್ಲಪ್ಪಶೆಟ್ಟಿ, ಬಸವಶೆಟ್ಟಿ, ಕರಿಗಶೆಟ್ಟಿ, ಚಿಕ್ಕತಾಯಮ್ಮ, ಸರೋಜಮ್ಮ ಮೊದಲಾದವರು ಹಾಡಿದ ತತ್ವಪದ–ದಿನಾಂಕ: 13–01–2021

೬. ಅದೇ, –ದಿನಾಂಕ: 13–01–2021

೭. ಅದೇ, ದಿನಾಂಕ: 13–01–2021

೮. ದೊಡ್ಡರಾಯಪೇಟೆ ಮಲೆ ಮಾದೇಶ್ವರ ಕಲಾ ಸಂಘದ ಪುಟ್ಟಮ್ಮ, ಕಾಳಮ್ಮ, ದುಂಡು ಮಾದಮ್ಮ ಮತ್ತು ಸಂಗಡಿಗರು ಹಾಡಿದ ತತ್ವಪದ–ದಿನಾಂಕ : 13–08–2022

೯. ಸತ್ತೇಗಾಲದ ಗುರುನಂಜೇಶಮಠದ ಸೋಮಣ್ಣ, ಪುಟ್ಟಮಾದಯ್ಯ, ಚೌಡಮ್ಮ, ರಾಚಯ್ಯ, ಮರಿಸಿದ್ದಯ್ಯ, ಗೌರಮ್ಮ, ಸಿದ್ದಮಣಿ ಮೊದಲಾದವರು ಹಾಡಿದ ತತ್ವಪದ–ದಿನಾಂಕ:16–09–2022

೧೦. ಪ್ರವೀಣ್‌ಚಂದ್ರ.ಎನ್.–ಅರಿವಿನ ದೀವಿಕೆ–ಪುಟ–263–ಐ.ಬಿ.ಎಚ್. ಪ್ರಕಾಶನ–ಬೆಂಗಳೂರು–2012

೧೧. ಶಿವಾನಂದ ಗುಬ್ಬಣ್ಣನವರ(ಸಂ)–ಬರಕೋ ಪದ ಬರಕೋ–ಪುಟ–263–ಕನ್ನಡ ಪುಸ್ತಕ ಪ್ರಾಧಿಕಾರ–ಬೆಂಗಳೂರು–1999

೧೨. ಕೊಳ್ಳೇಗಾಲ ತಾಲ್ಲೂಕು ಗುಂಡೇಗಾಲದ ಮರಿದೇವರು, ಕೃಷ್ಣಪ್ಪ, ಶಿವಮೂರ್ತಿ, ಕುಮಾರ, ರಾಜಮ್ಮ, ಸುಂದ್ರಮ್ಮ ಮೊದಲಾದವರು ಹಾಡಿದ ತತ್ವಪದ–ದಿನಾಂಕ:17–09–2022

೧೩. ಮಣಗಳ್ಳಿ ಗ್ರಾಮದ ಚಿಕ್ಕಮಾದಮ್ಮ, ಪ್ರಭುಸ್ವಾಮಿ, ಚಿಕ್ಕರಂಗಯ್ಯ, ನಂಜುಂಡಸ್ವಾಮಿ ಅವರು ಹಾಡಿದ ತತ್ವಪದ–ದಿನಾಂಕ:21–09–2022

೧೪. ಅಜ್ಜೀಪುರದ ಭೈರಮ್ಮ, ರಾಚಪ್ಪ, ಪುಟ್ಟಮ್ಮ, ಸಿದ್ಧರಾಜು, ಮಹದೇವಸ್ವಾಮಿ, ನಿಂಗಯ್ಯ ಅವರು ಹಾಡಿದ ತತ್ವಪದ ದಿನಾಕ: 17–07–2022

೧೫. ಚಿಕ್ಕಮಾಲಾಪುರ ಗ್ರಾಮದ ಈರಪ್ಪಸ್ವಾಮಿ, ನಂಜುಂಡ, ರಂಗಸ್ವಾಮಿ ಅವರು ಹಾಡಿದ ತತ್ವಪದ–ದಿನಾಂಕ:17–09–2022

೧೬. ಅದೇ, ದಿನಾಂಕ:17–09–2022